**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ :: 260/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಜ್ಯೋತಿಕ್ ಸಿಂದೆ | **PW**-04 |
| **ತಂದೆಯ ಹೆಸರು** | : | ಸಹದೇವಪ್ಪ | **CW**-06 |
| **ವಯಸ್ಸು** | : | 32 | |
| **ಉದ್ಯೋಗ** | : | ಚಾಲಕ | |
| **ವಾಸಸ್ಥಳ** | : | ಹಾವೇರಿ. | |

**ದಿನಾಂಕಃ04-06-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: A.P.P ರವರಿಂದ ::**

ನನಗೆ ಆರೋಪಿತರ ಪರಿಚಯ ಇದೆ. ಚಾಸಾ-1 ಮತ್ತು ಚಾಸಾ-4 ರವರ ಪರಿಚಯ ಇದೆ. ನನಗೆ ಈ ಪ್ರಕರಣದಲ್ಲಿ ಯಾವುದೇ ವಿಚಾರ ತಿಳಿದಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು.)

**::ಪಾಟೀಸವಾಲು :: A.P.P ರವರಿಂದ ::**

ದಿಃ23-04-2025 ರಂದು ನಾನು ಸಂಜೆ 6.45 ಗಂಟೆಗೆ ಕೆಲಸವನ್ನು ಮುಗಿಸಿಕೊಂಡು ಜೆ.ಸಿ.ಬಿ ವಾಹನದಲ್ಲಿ ವಾಪಾಸ್ಸು ಹೊರಟಾಗ ರಸ್ತೆಯ ಮೇಲಿದ್ದ ಕಾಂಕ್ರೀಟ್ ಬ್ಲಾಕ್ ಗಳನ್ನು ಸಮತಟ್ಟುಗೊಳಿಸುವಂತೆ ನನಗೆ 1ನೇ ಮತ್ತು 2ನೇ ಆರೋಪಿತರು ತಿಳಿಸಿದ ಮೇರೆಗೆ ನಾನು ಸದರಿ ಕಾಂಕ್ರೀಟ್ ಬ್ಲಾಕ್ ಅನ್ನು ಜೆ.ಸಿ.ಬಿ ಇಂದ ಸಮತಟ್ಟು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಚಾಸಾ-1 ಮತ್ತು ಚಾಸಾ-4 ರವರು ಅಲ್ಲಿಗೆ ಬಂದು ನಮ್ಮ ಮನೆಗೆ ಹೋಗುವ ರಸ್ತೆಯ ಅಡ್ಡಲಾಗಿ ಕಾಂಕ್ರೀಟ್ ಅನ್ನು ಏಕೆ ಸುರಿದಿದ್ದೀರಿ ಎಂದು ಆರೋಪಿತರನ್ನು ಏಕೆ ಪ್ರಶ್ನಿಸಿದರು ಎಂದರೆ ನನಗೆ ಗೊತ್ತಿಲ್ಲ.

ಆ ಸಂದರ್ಭದಲ್ಲಿ 1 ನೇ ಆರೋಪಿತರು ಏಕಾ-ಏಕಿ ಚಾಸಾ-1 ಮತ್ತು ಚಾಸಾ-4 ರವರಿಗೆ ಅವಾಚ್ಯ ಶಬ್ದದಿಂದ ಬೈದು ಅವರ ಮೇಲೆ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ 25-04-2025 ರಂದು ಪೋಲೀಸರ ಸಮಕ್ಷಮ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ದಿಃ25-04-2025 ರ ಹೇಳಿಕೆಯ ಭಾಗಾಂಶವನ್ನು ತೋರಿಸಲಾಗಿದ್ದು, ಸಾಕ್ಷಿಗೆ ಅದನ್ನು ಓದಿ ಹೇಳಲಾಗಿದ್ದು -

ಸಾಕ್ಷಿಯು ಸದರಿ ಹೇಳಿಕೆಯನ್ನು ನಿರಾಕರಿಸಿರುತ್ತಾರೆ. ಸದರಿ ಹೇಳಿಕೆಯ ಭಾಗಾಂಶ ಈ ಕೆಳಗಿನಂತೆ ಇದೆಃ-

*''ದಿಃ23-04-2025 ರಂದು ......................................................... ಹೋದರು''.* ಸದರಿ ಹೇಳಿಕೆಯ ಭಾಗಾಂಶವನ್ನು **ನಿಪಿ-10** ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ಶರೀಕಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಇಲ್ಲ ::**

**ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.